ಕರ್ನಾಟಕ ಸರ್ಕಾರ

# ಮೀನುಗಾರಿಕೆ ನಿರ್ದೇಶನಾಲಯ

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560 001

ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

ಸಂಖ್ಯೆ: ಮೀನಿ/ ಎಡಿಎಂ-1/13 /2021E-517244 ದಿನಾಂಕ : 06/07/2021

## ಸುತ್ತೋಲೆ

ವಿಷಯ:- ಮೀನುಗಾರಿಕೆ ಇಲಾಖೆಯ ಅಧಿಕಾರಿಗಳು/ಸಿಬ್ಬಂದಿಗಳು ಮೇಲಾಧಿಕಾರಿಗಳ ಮೂಲಕ ಪ್ರಸ್ತಾವನೆ/ಮನವಿಗಳನ್ನು ಸಲ್ಲಿಸುವ ಕುರಿತು.

----

ವಿಷಯದ ಕುರಿತಂತೆ, ಮೀನುಗಾರಿಕೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು/ಸಿಬ್ಬಂದಿಗಳು ಕಚೇರಿ ಪ್ರಸ್ತಾವನೆಗಳು/ಮನವಿಗಳನ್ನು ಸಲ್ಲಿಸುವಾಗ ಶಿಷ್ಟಾಚಾರ ಪಾಲಿಸದೇ ನೇರವಾಗಿ ಸರ್ಕಾರದ ಕಾರ್ಯದರ್ಶಿಗಳಿಗೆ ಮನವಿಗಳನ್ನು ಸಲ್ಲಿಸುವುದು/ಜಾಲ ತಾಣಗಳ ಮೂಲಕ ಮನವಿಗಳನ್ನು ರವಾನಿಸುವುದನ್ನು ಅಭ್ಯಾಸ ಮಾಡಿಕೊಂಡಿರುವುದನ್ನು ಗಮನಿಸಲಾಗಿದೆ. ಇದು ಸರಿಯಾದ ಕ್ರಮವಾಗಿರುವುದಿಲ್ಲ.

ಆದ್ದರಿಂದ ಈ ಕುರಿತು ಇಲಾಖೆಯ ಅಧಿಕಾರಿಗಳು/ಸಿಬ್ಬಂದಿಗಳಿಗೆ ಈ ಮೂಲಕ ಸೂಚಿಸುವುದೇನೆಂದರೆ, ಪ್ರಸ್ತಾವನೆ/ಮನವಿಗಳನ್ನು ಸಲ್ಲಿಸಬೇಕಾದಲ್ಲಿ, ಅವರು ಸೇವೆ ಸಲ್ಲಿಸುತ್ತಿರುವ ಕಚೇರಿಯ ಮೂಲಕ Through Proper Channel) ಇಲಾಖೆಯ ಮುಖ್ಯಸ್ಥರಿಗೆ ಅಂದರೆ ಮೀನುಗಾರಿಕೆ ನಿರ್ದೇಶಕರಿಗೆ ಸಲ್ಲಿಸಬೇಕಾಗಿರುತ್ತದೆ. ಈ ಕ್ರಮವನ್ನು ಉಲ್ಲಂಘಿಸಿ, ನೇರವಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಿದಲ್ಲಿ ಅಂತಹ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದಾಗಿ ಈ ಮೂಲಕ ತಿಳಿಸಲಾಗಿದೆ.

ಸಹಿ/-

ಮೀನುಗಾರಿಕೆ ನಿರ್ದೇಶಕರು,

ಇವರಿಗೆ:

ಎಲ್ಲಾ ಮೀನುಗಾರಿಕೆ ಅಧಿಕಾರಿಗಳು/ಸಿಬ್ಬಂದಿಗಳು.

6/7/2021

ಮೀನುಗಾರಿಕೆ ನಿರ್ದೇಶಕರ ಪರವಾಗಿ,

6/7/2021